www.ecourtsindia.com





**(ದಿನಾಂಕ 21.01.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಟಿ ಆರ್ ಎಸ್ ವಕೀಲರಿಂದಃ-**

ನನ್ನನ್ನು ಹಾಲೆಕಲ್ಲು ತಿಪ್ಪೇಶ್ ಗೆ ವಿವಾಹ ಮಾಡಿ ಕೊಟ್ಟಿರುತ್ತಾರೆ. ನನ್ನ ಮದುವೆ 25 ವರ್ಷದ ಹಿಂದೆ ಆಗಿರುತ್ತದೆ. ನನ್ನ ಅಜ್ಜ ಬಸ್ಸಪ್ಪ. ಅಜ್ಜಿ ಬಸ್ಸವಮ್ಮ. ಅವರಿಗೆ ಮೂರು ಜನ ಮಕ್ಕಳು. ಗೋಣೆಮ್ಮ ಕೊಟ್ರಪ್ಪ ಮತ್ತು ಯಲ್ಲಪ್ಪ. ಸದರಿಯವರಲ್ಲಿ ಗೋಣೆಮ್ಮ ಮಾತ್ರ ಬದುಕಿದ್ದಾರೆ. ದಾವಾ ಹೂಡುವ ಸಂಧರ್ಭದಲ್ಲಿ ನಮ್ಮ ತಂದೆ ಬದುಕಿದ್ದರು. ನಮ್ಮ ತಂದೆ ಬಸವನಕೋಟೆ ಕೊಟ್ರಪ್ಪ. ಅವರ ಹೆಂಡತಿ ನನ್ನ ತಾಯಿ ಶಾಂತಮ್ಮ. ಶಾಂತಮ್ಮ 8 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. ಕೊಟ್ರಪ್ಪ ಮತ್ತು ಶಾಂತಮ್ಮನಿಗೆ 8 ಜನ ಮಕ್ಕಳು. ಅವರೆಂದರೆ ಕೊಟ್ರಮ್ಮ, ಬಸ್ಸಪ್ಪ, ಗೋಣೆಪ್ಪ, ನಾಗರಾಜ, ರೇಣುಕಮ್ಮ, ಯಲ್ಲಪ್ಪ, ಗೀತಮ್ಮ ಮತ್ತು ಚೌಡಮ್ಮ. ನನ್ನ ಚಿಕ್ಕಪ್ಪ ಯಲ್ಲಪ್ಪ ಮರಣ ಹೊಂದಿರುತ್ತಾರೆ. ನಮ್ಮ ಕುಟುಂಬಕ್ಕೆ ಬಸವನಕೋಟೆ ಕುಟುಂಬದವರು ಕರೆಯುತ್ತಾರೆ ಎಂದರೆ ಸರಿ. ಬಸವನಕೋಟೆ ಜಗಳೂರು ತಾಲೂಕಿನಲ್ಲಿ ಇರುತ್ತದೆ ಎಂದರೆ ಸರಿ. ಮೂಲತಃ ನನ್ನ ಅಜ್ಜಿ ಬಸವನಕೋಟೆಯಿಂದ ಬಂದಿರುತ್ತಾರೆ ಎಂದರೆ ಸರಿ. ಹೀಗಾಗಿ ನಮ್ಮ ಕುಟುಂಬಕ್ಕೆ ಬಸವನಕೋಟೆ ಯವರು ಎಂದರೆ ಸರಿ. ನಾವು ಮೂಲತಃ ದೇವರ ತಿಮಲಾಪುರದವರು ಅಲ್ಲಾ ಎಂದರೆ ಸರಿ. ನಾನು ಅಜ್ಜ ಬಸ್ಸಪ್ಪನನ್ನು ನೋಡಿರುವುದಿಲ್ಲಾ. ನಮ್ಮ ಅಜ್ಜ ನಮ್ಮ ತಂದೆ ಅವರ ಸಹೋದರ ಸಹೋದರಿಯವರು ಚಿಕ್ಕವರಿದ್ದಾಗಲೇ ಮರಣ ಹೊಂದಿರುತ್ತಾರೆ ಎಂದರೆ ಸರಿ. ಬಸ್ಸಪ್ಪನಿಗೆ ಬಸವನಕೋಟೆಯಲ್ಲಿ ಆಸ್ತಿಗಳು ಇದ್ದವು. ಬಸ್ಸಪ್ಪನಿಗೆ ಬಸವನಕೋಟೆಯಲ್ಲಿ ಆಸ್ತಿಗಳು ಇದ್ದವು ಅಂತಾ ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿರುವುದಿಲ್ಲಾ. ಬಸ್ಸಪ್ಪನಿಗೆ ಬಸವನಕೋಟೆಯಲ್ಲಿ ಯಾವ

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-3.pdf

www.ecourtsindia.com



ಯಾವ ಆಸ್ತಿಗಳು ಇದ್ದವು ಅಂತಾ ನನಗೆ ಗೊತ್ತಿಲ್ಲಾ. ಬಸವನಕೋಟೆಯಲ್ಲಿ ಬರಗಾಲ ಇದ್ದ ಕಾರಣ ನನ್ನ ಅಜ್ಜಿ ಮತ್ತು ಸಣ್ಣ ಮಕ್ಕಳು ತಿಮಲಾಪುರಕ್ಕೆ ಬಂದರು ಎಂದರೆ ಸರಿ. ತಮಲಾಪುರದಲ್ಲಿ ನನ್ನ ಅಜ್ಜಿ ಕೂಲಿ ಮಾಡಿ ಜೀವನ ಮಾಡಿರುತ್ತಾಳೆ ಎಂದರೆ ಸರಿ. ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ವಯಸ್ಕರಾದ ನಂತರ ಬೇರೆಯವರ ಜಮೀನು ಕೋರಿನ ಮೇರೆಗೆ ಸಾಗುವಳಿ ಮಾಡಿಕೊಂಡು ಇದ್ದಾ ನಂತರ ಒಂದೊಂದೇ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಕೊಟ್ರಪ್ಪ ಚಿಕ್ಕಪ್ಪ ನಮ್ಮ ಅತ್ತೆ ಗೋಣೆಮ್ಮನ ವಿವಾಹ ಮಾಡಿರಾುತ್ತಾರೆ ಎಂದರೆ ಸರಿ. ನಂತರ ಅವರು ಸಹ ವಿವಾಹ ಆಗಿ ಜೀವನ ಸಾಗಿಸುತ್ತಿದ್ದಾರೆ ಎಂದರೆ ಸರಿ. ಎಲ್ಲರಿಗೂ ಮಕ್ಕಳು ಜನಿಸಿದ ನಂತರ ನನ್ನ ತಂದೆ ಕೊಟ್ರಪ್ಪ ಮತ್ತು ಚಿಕ್ಕಪ್ಪ ಯಲ್ಲಪ್ಪ ಆಸ್ತಿಗಳನ್ನು ಪಾಲು ಮಾಡಿಕೊಂಡು ಪ್ರತ್ಯೇಕವಾಗಿ ಇದ್ದಾರೆ ಎಂದರೆ ಸರಿ. 1988 ರಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪ ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪಾಲು ವಿಭಾಗ ಆದ ನಂತರ ನನ್ನ ತಂದೆ ಚಿಕ್ಕಪ್ಪ ಸ್ವತಂತ್ರವಾಗಿ ದುಡಿದು ಬೇರೆ ಬೇರೆ ಆಸ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಐಟಂ ನಂಬರ 1 ರಿಂದ 10 ದಾವಾ ಆಸ್ತಿ ಗಳು ನಮ್ಮ ತಂದೆ ಮಾಡಿದ ಆಸ್ತಿ ಎಂದರೆ ಸರಿ. ನಮ್ಮ ತಂದೆ 1 ರಿಂದ 10 ನೇ ಆಸ್ತಿಗಳನ್ನು ಸಂಪಾದಿಸಿ 4 ಜನ ಹೆಣ್ಣು ಮಕ್ಕಳ ವಿವಾಹ ಮಾಡಿರುತ್ತಾರೆ ಎಂದರೆ ಸರಿ. ನಂತರ 4 ಜನ ಗಂಡು ಮಕ್ಕಳ ವಿವಾಹ ಕೂಡ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಸಂಪ್ರದಾಯದ ಪ್ರಕಾರ ಉಡುಗೋರೆ ಕೊಟ್ಟು ನನಗೆ ವಿವಾಹ ಮಾಡಿರುತ್ತಾರೆ ಎಂದರೆ ಸರಿ. 15 ಸಾವಿರ ರೂ ವರದಕ್ಷಿಣೆ ಕೊಟ್ಟಿರುತ್ತಾರೆ. ಒಂದು ಆಕಳು, ಒಂದು ಎಮ್ಮೆ, ಎರಡು ಕುರಿ ಮರಿ ಕೊಟ್ಟಿದ್ದರು. ಇತ್ತೀಚಿಗೆ ನಮ್ಮ ತಂದೆ ನನಗೆ 5 ಲಕ್ಷ ರೂಗಳನ್ನು ನನ್ನ ತಾಖೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಖಾತೆ ತಂದೆಯ ಹೆಸರಿನಲ್ಲಿ ಜಂಟಿ ಆಗಿತ್ತು. 5 ಲಕ್ಷ ಹಣವನ್ನು ನಾನೇ

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-3.pdf

ವಿಡ್ರಾ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬಸವನಕೋಟೆ ಕೊಟ್ರಪ್ಪನ ಖಾತೆಯಿಂದ ನನ್ನ ಖಾತೆಗೆ 5 ಲಕ್ಷ ರೂ ಗಳನ್ನು ಜಮಾ ಆಗಿರುತ್ತದೆ ಎಂದರೆ ಎಂದರೆ ಸರಿ. ಸಾಕ್ಷಿ ಒಪ್ಪಿರುವ ಕಾರಣ ಸದರಿ ದಾಖಲೆಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ನಮ್ಮ ತಂದೆ ನಮ್ಮ ಹೆಣ್ಣು ಮಕ್ಕಳ ಎಲ್ಲಾರ ವಿವಾಹ ಆದ ನಂತರ ಮೌಖಿಕವಾಗಿ 4 ಜನ ಗಂಡು ಮಕ್ಕಳಿಗೆ ಮೌಖಿಕವಾಗಿ ಆಸ್ತಿ ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಗಂಡ ಕೂಲಿ ಕೆಲಸ ಮಾಡುತ್ತಾರೆ. ನಮಗೆ 2 ಎಕರೆ ಜಮೀನು ಇದೆ. ಮೊದಲು 9 ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ನನ್ನ ಗಂಡ ಆಸ್ತಿ ಮಾರಿಕೊಂಡು ಈಗ ಕೇವಲ 2 ಎಕರೆ ಉಳಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ದುಷ್ಚಟಗಳಿಗೆ ಬಲಿಯಾಗಿ ಆಸ್ತಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ದುಷ್ಚಟಗಳಿಗೆ ಬಲಿಯಾಗಿದ್ದಾರೆ ಎಂದರೆ ಮೊದಲು ದುಷ್ಚಟಗಳಿಗೆ ದಾಸನಾಗಿದ್ದ ಈಗ ಇರುವುದಿಲ್ಲಾ. ಈ ದಿನ ನನ್ನ ಗಂಡ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ನಮ್ಮ ತಂದೆ ಬಸವನಕೋಟೆ ಕೊಟ್ರಪ್ಪ ಜೀವಂತ ಕಾಲದಲ್ಲಿ ಆಸ್ತಿಗಳನ್ನು ವಿಲ್ ಮುಖಾಂತರ ವಿಲೇವಾರಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲಾ. 26.03.2022 ರಂದು ವಿಲ್ ನೋಂದಣಿ ಆಗಿರುತ್ತದೆ ಎಂದರೆ ಗೊತ್ತಿಲ್ಲಾ. ಗ್ರಾಮ ಪಂಚಾಯತಿ ಸದಸ್ಯ ರಮೇಶ್ ಪೂಜಾರ ಪ್ರಸನ್ನ ಗೊತ್ತಿಲ್ಲಾ. ಸದರಿಯವರಿಗೂ ನನಗೂ ದ್ವೇಷ ಇಲ್ಲಾ. ನನಗೂ ಯಲ್ಲಪ್ಪನಿಗೂ ಯಾವುದೇ ದ್ವೇಷ ಇಲ್ಲಾ. ನನ್ನ ಸಹೋದರಿಯರು ಕೊಟ್ರಮ್ಮನನ್ನು ಹರಿಹರ ತಾಲೂಕು ಸಾರಥಿಗ್ರಾಮದ ಮಂಜಪ್ಪನಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಗೀತಮ್ಮ ನನ್ನು ಜಗಳೂರು ತಾಲೂಕಿನ ಮಂಜಪ್ಪನಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ. ಚೌಡಮ್ಮನನ್ನು ಎಮ್ಮೆ ಹಟ್ಟಿ ಗ್ರಾಮದ ಹನುಮಪ್ಪನಿಗೆ ವಿವಾಹ ಮಾಡಿ

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-3.pdf

ಕೊಟ್ಟಿರುತ್ತಾರೆ. ಹೆಣ್ಣು ಮಕ್ಕಳು ಎಲ್ಲರೂ ಗಂಡಂದಿರ ಮನೆಯಲ್ಲಿ ಇದ್ದಾರೆ. ಗೀತಮ್ಮ ಮಾತ್ರ ತವರು ಮನೆಯಲ್ಲಿ ಇದ್ದಾರೆ. ಗೀತಮ್ಮ ನಮ್ಮ ತಂದೆ ಕೊಟ್ಟ ಜಾಗದಲ್ಲಿ ದಾವಾದ ಡೋರ್ ನಂಬರ 287 ಮನೆಯನ್ನು ಸರ್ಕಾರದ ಸಹಾಯ ಧನ ದಿಂದ ನಿರ್ಮಿಸಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂಬರ 12 ರ ಆಸ್ತಿ ಟ್ರ್ಯಾಕ್ಟರ್ ಯಲ್ಲಪ್ಪನ ಹಿಸ್ಸೆಗೆ ಹೋದ ಟ್ರ್ಯಾಕ್ಟರ್ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ನಮ್ಮ ತಂದೆಯ ಹೆಸರಿನಲ್ಲಿ ಇದೆ ಅಂತಾ ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಟಿ ವಿ ಎಸ್ ಎಕ್ಸಎಲ್ ಬೈಕ್ ಇದೆ ಅಂತಾ ತೋರಿಸಲು ದಾಖಲೆಯನ್ನು ವಕೀಲರಿಗೆ ಕೊಟ್ಟಿರುತ್ತೇನೆ. ನಮ್ಮ ಮನೆತನದಲ್ಲಿ ಒಂದು ಜೊತೆ ಎತ್ತು, ಐವತ್ತು ಕುರಿಗಳು, ಇಪ್ಪತು ಎಮ್ಮೆ ಇರುವುದಿಲ್ಲಾ ಎಂದರೆ ಸರಿಯಲ್ಲ.

ನಮ್ಮ ತಂದೆ ವಿಲ್ ನಲ್ಲಿ ಐದು ಲಕ್ಷ ರೂ ಕೊಟ್ಟ ಬಗ್ಗೆ ನಮೂದಿಸಿ ಮೂರು ಗುಂಟೆ ಸೈಟ್ ನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲಾ. ಸಾಕ್ಷಿಗೆ ಈಗ ವಿಲ್ ಓದಿ ಹೇಳಿದಾಗ ತನಗೆ ಗೊತ್ತಿಲ್ಲಾ ಅಂತಾ ಹೇಳುತ್ತಾರೆ. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮ್ಮ ತಂದೆಯ ಆಸ್ತಿಗಳು ಇದ್ದು ಅವುಗಳಿಂದ ಬಂದ ಆದಾಯ ದಿಂದ ಉಳಿದ ಆಸ್ತಿಗಳನ್ನು ಖರೀದಿಸಿದ್ದಾರೆ ಅಂತಾ ಸುಳ್ಳು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ವಕೀಲರಿಗೆ ದಾಖಲೆಯನ್ನು ಕೊಟ್ಟಿರುತ್ತೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲಾ ಎಂದರೆ ಸರಿಯಲ್ಲ. ನಮ್ಮ ಅಜ್ಜ ಬಸ್ಸಪ್ಪನ ತಂದೆ ಬಸ್ಸಪ್ಪ. ದಾವಾ ಆಸ್ತಿಗಳು ಎಲ್ಲವೂ ನಮ್ಮ ತಂದೆ ಬಸವನಕೋಟೆ ಕೊಟ್ರಪ್ಪ ಸ್ವತಂತ್ರವಾಗಿ ದುಡಿದ ಆಸ್ತಿಗಳು ಎಂದರೆ ಸರಿ. ಹೀಗಾಗಿ ನಮ್ಮ ತಂದೆ ಬಸನಕೋಟೆ ಕೊಟ್ರಪ್ಪ ಯಾರು ಯಾರಿಗೆ ಎಷ್ಟು ಆಸ್ತಿ ಹೋಗಬೇಕು ಅಂತಾ ಮೃತ್ಯೂ ಪತ್ರ ಬರೆದಿದ್ದಾರೆ ಎಂದರೆ ಸರಿಯಲ್ಲ. ಹೀಗಾಗಿ ದಾವಾದ

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-3.pdf

www.ecourtsindia.com

www.ecourtsindia.com





ಆಸ್ತಿಗಳಲ್ಲಿ ನನಗೆ ಹಕ್ಕು ಇಲ್ಲಾ ಕೇವಲ ಮೃತ್ಯೂ ಪತ್ರದಲ್ಲಿ ಕಾಣಿಸಿದ ಮೂರು ಸೆಂಟ್ಸ್ ನಿವೇಶನಕ್ಕೆ ಮಾತ್ರ ನಾನು ಹಕ್ಕು ದಾರಳಾಗಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲಾದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಪಡೆಯಲು ಹಕ್ಕು ಇಲ್ಲಾ ಎಂದರೆ ಸರಿಯಲ್ಲ. ನಮ್ಮ ಸಹೋದರಿಯರು ಯಾರೂ ಕೂಡ ದಾವಾ ಹೂಡಿಲ್ಲಾ ಎಂದರೆ ಸರಿ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-3.pdf